

ಬಗ್ಗೆಯ ಪಶುವೈದ್ಯ ಜ್ಞಾನ ಪಾರಂಪರಿಕವಾಗಿ ಬಂದಿದೆ. ಇಂತಹ ಪಶುಚಿಕಿತ್ಸೆಯ ತಜ್ಞರ ಬಗ್ಗೆ ಸರ್ಕಾರಕ್ಕೆ ಮಾಹಿತಿ ಇದೆಯೋ, ಇಲ್ಲವೋ ತಿಳಿಯದು! ಆದರೆ ನಮ್ಮ ಹಳ್ಳಿಗಾಡಿನ ಜನತೆ ಮಾತ್ರ ಅವರ ಕೈಬಿಟ್ಟಿಲ್ಲ. ವರ್ಷೊಂಬತ್ತು ಕಾಲವು ಬಿಡುವಿಲ್ಲದಿರುವ ಕೊರ್ಲೆ ತಿಮ್ಮಣ್ಣ ಹಟ್ಟಿಯಲ್ಲಿ ಇರುವುದೇ ಅಪರೂಪವೆಂದು ನಮಗೆ ತಿಳಿದಿತ್ತು. ಯುಗಾದಿ ದಿನವಾದರೂ ಅವರು ಇದ್ದೇ ಇರುತ್ತಾರೆ ಎಂಬ ನಂಬುಗೆಯಿಂದ ಕೊರ್ಲೆ ತಿಮ್ಮಣ್ಣನವರ ಹಟ್ಟಿ ಮುಂದೆ ಬಂದು ನಿಂತೆವು. ಬಿಸಿಲ ಧಗೆಗೆ ಸುಧಾರಿಸಿಕೊಳ್ಳುತ್ತಿದ್ದ ಕೊರ್ಲೆ ತಿಮ್ಮಣ್ಣನವರು ನಮ್ಮನ್ನು ನೋಡಿ ಎದ್ದುನಿಂತರು. 'ಇವತ್ತು ಹಬ್ಬ ಅಮ್ತುವಾ ಮನೆಯಲ್ಲಿ ಅವರೆ, ಇಲ್ಲ ಅಂದಿದ್ರೆ ಯಾವ ದೇಸಕ್ಕೆ ಹೋಗೋರೋ, ನಮಗೇ ಗೊತ್ತಿರಲ್ಲ! ಅವರು ಬಂದಾಗ್ಲೆ ಗೊತ್ತಾಗೋದು!' ಎಂದು ಅವರ ಶ್ರೀಮತಿಯವರಾದ ತಿಮ್ಮಕ್ಕ ಅವರು ಹೇಳಿದ ಮಾತುಗಳು ತಿಮ್ಮಣ್ಣನವರ ಸಂಚಾರಿ ಜೀವನದ ಬಗ್ಗೆ ಎಲ್ಲವನ್ನೂ ಹೇಳುತ್ತಿದ್ದವು. ತಿಮ್ಮಣ್ಣನವರಿಗೆ ಗೊತ್ತಿರುವುದು ಎರಡೇ ಸಂಗತಿ; ಒಂದು: ಜುಂಜಪ್ಪನ ಪದ ಹಾಡುವುದು. ಅವರ ಹಾಡುಗಾರಿಕೆಗೆ ಗಣೆ ಊದುವುದು ಈಬತ್ತಿ ತಿಮ್ಮಣ್ಣ. ಇವರಿಬ್ಬರದೂ ಈಡು-ಜೋಡು. ಎಲ್ಲಿಗೆ ಹೋದರೂ ಇವರಿಬ್ಬರೂ ಒಟ್ಟಿಗೆ ಹೋಗಲೇಬೇಕು! ಈಬತ್ತಿ ತಿಮ್ಮಣ್ಣನ ಗಣೆಯ ನಾದ ಇಲ್ಲದಿದ್ದರೆ ಕೊರ್ಲೆ ತಿಮ್ಮಣ್ಣನವರಿಗೆ ಸರಸೋತಿ ಅವರ ನಾಲಗೆಯ ಮೇಲೆ ಮೂಡುವುದೇ ಇಲ್ಲ ಎಂದು ಹೇಳುತ್ತಾರೆ. ಎರಡನೆಯ ಆಸಕ್ತಿ ಎಂದರೆ: ಪಶುವೈದ್ಯ. ಈ ವೈದ್ಯಪದ್ಧತಿಯಲ್ಲಿ ಅವರಿಗೆ ಸರಿಸಮಾನರಾಗಿರುವವರು ಬಹುಶಃ ವಿರಳ! ಈ ಎರಡನ್ನೂ ಪದಗಾರ ತಿಮ್ಮಣ್ಣನವರು ಸಮಾನ ಆಸಕ್ತಿ ಮತ್ತು ಶ್ರದ್ಧೆಯಿಂದ ಆಚರಿಸಿಕೊಂಡು ಬಂದಿದ್ದಾರೆ. ಇಂತಹ ಬಿಡುವಿಲ್ಲದ ಓಡಾಟದ ಕಾರಣಕ್ಕಾಗಿಯೇ ಅವರ ಆರೋಗ್ಯ ಕೊಂಚ ಕೈಕೊಟ್ಟಿರುವುದು!

ಪದಗಾರ ತಿಮ್ಮಣ್ಣ ಅಷ್ಟೇನು ಎತ್ತರದ ಆಳಲ್ಲ.